ಶ್ರೀ ಎಸ್. ಶಿವಪ್ಪ.—ಮೂರು ಯೋಜನೆಗಳನ್ನು ಮಾಡಿದಾಗ್ಯೂ ಮತ್ತು ಸಹಸ್ರಾರು ಕೋಟಿಯಷ್ಟು ರೂಪಾಯಿಗಳನ್ನು ಖರ್ಚು ಮಾಡಿದಾಗಲೂ ಸಾಕಷ್ಟು ಮುಂದಿಗೆ ಉದ್ಯೋಗಗಳನ್ನು ದೊರಕಿಸಿಕೊಡಲು ಆಗಲಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಅದು ಅವರ ಅಭಿಪ್ರಾಯ.

Sri SANJEEVANATHA IKALA.—Has the Government got figures of goldsmiths still unemployed in the State ?

Sri D. DEVARAJ URS.—I am trying to cover that figure.

Sri D. M. SIDDIAH.—In the light of the discussion, will the Government at least consider the necessity of having a survey to find out skilled as well as unskilled unemployed ?

Sri D. DEVARAJ URS.—I think the survey so far made and the figures available quite serve the purpose for formulating the plans.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಒಂದು, ಎರಡು ಮತ್ತು ಮೂರು ಯೋಜನೆಗಳಲ್ಲಿಯೂ ಫ್ಯಾಮಿಲಿ ಪ್ಲಾನಿಂಗ್ ಯೋಜನೆಯನ್ನು ತಂದು ಅದು ವಿಫಲವಾಗಿರುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಫ್ಯಾಮಿಲಿ ಪ್ಲಾನಿಂಗ್ ಕಂಪಲ್ಸರಿಯಲ್ಲ ; ಅದು ವಾಲಂಟರಿ.

Working of the Kunchur Village Panchayat in Harapanahalli Taluk.

*Q.—744. Sri ANGADI CHANNABASAPPA (Hadagalli).—

Will the Government be pleased to state :—

(*a*) whether they are aware that Kunchur Village Panchayat in Harapanahalli Taluk has not held any meetings for the last two years ;

(*b*) whether they are aware that the Accounts of the said Panchayat have not been audited since 1958 ;

(*c*) whether it is a fact that the said village Panchayat has not collected any tax, fees, etc., legitimately due to it by the villagers ;

(*d*) what is the amount by way of taxes, fees, etc., which is time barred ;

(*e*) what is the action they have taken against the said Panchayat and the results thereon ?

*A.—Sri KONDAJJI BASAPPA (Deputy Minister for Co-operation).—

(*a*) No.

(*b*) Yes.

(*c*) No.

(*d*) A sum of Rs. 27,943-19 is reported to be the arrears due and the actual time-barred amount will have to be arrived at only after audit.

(*e*) A detailed enquiry regarding the working of this Panchayat has been ordered to be held by the Assistant Commissioner, Hospet Sub-Division.

Sri ANGADI CHANNABASAPPA.—May I know when the Government came to know that these accounts have not been audited since 1958 ?

†Sri KONDAJJI BASAPPA.—They came to know earlier but there was no audit staff available. The Department of the Controller of State Accounts was requested to recruit staff. Because of the difficulty of recruitment, no audit was taken up.

Sri ANGADI CHANNABASAPPA.—What is the scheme that has been formulated by Government to complete the audit of these village panchayats after the close of the financial year?

Sri KONDAJJI BASAPPA.—We are now recruiting audit staff. Regular audit will be conducted.

Mr. SPEAKER.—Are there any rules framed?

Sri KONDAJJI BASAPPA.—I am not aware of it.

Sri SANJEEVANATHA IKALA.—Can I presume that there are several panchayats whose accounts have not been audited for the last several years.

Sri KONDAJJI BASAPPA.—To some extent the Hon'ble Member is right.

Sri G. V. GOWDA.—How many auditors are required to conduct the audit of the accounts of all the panchayats in the State?

Sri KONDAJJI BASAPPA.—That information is not available.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವು ಪಂಚಾಯತಿಗಳ ಚೇರ್ಮನ್ನರವರು ರೆವೆನ್ಯೂ ಇಲಾಖೆಯವರೊಡನೆ ಇಲ್ಲದ ವ್ಯವಹಾರಗಳನ್ನು ಹೆಚ್ಚು ಮಾಡಿಕೊಂಡು ಕೋರ್ಟಿಗೆ ಹೋಗಿ ಪಂಚಾಯತಿಗಳ ಉತ್ಪತ್ತಿಯನ್ನೂ ಹಾಳುಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

Sri KONDAJJI BASAPPA.—The question is vague. If he puts a specific question, the Government will answer it.

ಶ್ರೀ ಬಿ. ಎಲ್. ಗೌಡ.—ಕುಂಚೂರು ಪಂಚಾಯತಿಯಲ್ಲಿ ಹಣ ದುರುಪಯೋಗವಾಗಿದೆ ಎಂದು ಸರಕಾರಕ್ಕೆ ಯಾವಾಗ ತಿಳಿಯಿತು?

ಶ್ರೀ ಕೊಂಡಜ್ಜಿ ಬಸಪ್ಪ.—ದುರುಪಯೋಗ ಎಂದೇನೂ ವರದಿ ಬಂದಿಲ್ಲ.

ಶ್ರೀ ಪಿ. ಎಂ. ದೇವ್.—ಪಂಚಾಯತಿಗಳಿಗೆ ಆದಾಯವಿಲ್ಲದೇ ಹೋದರೆ ಇಲ್ಲಿ ಹೇಗೆ ಕೆಲಸ ಮಾಡಬೇಕು? ಇದು ಸಮಂಜಸವಾಗಿರುತ್ತದೆಯೇ?

Sri KONDAJJI BASAPPA.—Some of these Secretaries are under training. Immediately after training is over, they will be deputed for these panchayats.

ಶ್ರೀ ಎಸ್. ಎಂ. ಗುರೆಡ್ಡಿ.—27,943-19 ರೂಪಾಯಿಗಳಷ್ಟು ಬಾಕಿ ಇದೆ ಎಂದು ಹೇಳಿದ್ದೀರಿ. ಇಷ್ಟು ಬಾಕಿ ಇರುವ ಹಣವು ಈ ಒಂದು ಪಂಚಾಯತಿಯಿಂದಲೇ ಬರುತ್ತದೆ ಎನ್ನುವ ನಂಬಿಕೆ ಏನಿದೆ?

Sri KONDAJJI BASAPPA.—That is the opinion of the Committee. That is for the House and also for the Government to consider whether such part-time Secretaries can be appointed. There may not be need for permanent Secretary. The Committee is of opinion that there may be part-time Secretaries as in Madras and other States.

ಶ್ರೀ ಸಿ. ಆರ್. ರಂಗೇಗೌಡ.—ಇಲ್ಲಿ ಒಂದು ಸಾಲಿನ ಕಂದಾಯ ಎಷ್ಟಾಗುತ್ತದೆ?

Sri KONDAJJI BASAPPA.—That I am not aware of.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಷ್ಟೊಂದು ಬಾಕಿಯಿರುವ ಹಣವನ್ನು ವಸೂಲು ಮಾಡುವುದಕ್ಕೆ ಗ್ರಾಮಪಂಚಾಯ ತಿಗಳಲ್ಲಿ ಬೇರೆ ಏನಾದರೂ ಸಿಬ್ಬಂದಿಯನ್ನು ನೇಮಿಸಿದ್ದೀರಾ?

ಶ್ರೀ ಕೊಂಡಜ್ಜಿ ಬಸಪ್ಪ.—ರೆವೆನ್ಯೂ ಇಲಾಖೆಯವರ ಮೂಲಕವೇ ಈ ಹಣವನ್ನು ವಸೂಲು ಮಾಡುತ್ತಿದ್ದೇವೆ. ಆದರೆ ಇಲ್ಲಿದ್ದ ಪಂಚಾಯತಿ ಸೆಕ್ರೆಟರಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದುದರಿಂದ ಇಲ್ಲಿ ವಸೂಲು ಮಾಡುವುದಕ್ಕೆ ಸ್ವಲ್ಪ ಕಷ್ಟವಾಗಿದೆ.

Sri G. V. GOWDA.—Because the Assistant Commissioner or the officer of the Revenue Department did not inspect these panchayats periodically, that is why arrears are there. If that is so, will the Government make good all the amount of the time-barred arrears ?

Sri KONDAJJI BASAPPA.—Government cannot make good ; it is the person responsible who will have to make good. After the audit, it will be found out.

Smt. VIJAYADEVI RAGHAVENDER RAO DESAI.—When do the arrears become time-barred ?

Sri KONDAJJI BASAPPA.—I am not aware of it.

Medical Colleges opened during the current year in the State.

*Q.—745. Sri A. KRISHNA SHETTY (Mangalore-II).—

Will the Government be pleased to state :—

(*a*) the number of Medical Colleges opened during the current Financial year in the State ;

(*b*) whether there are any proposals before the Government to open more Medical Colleges ;

(*c*) the number of posts of the teaching staff that are vacant in the Government Medical Colleges in the State and since when they are lying vacant ;

(*d*) what are the reasons for not filling them up so far ?

A.—Sri K. NAGAPPA ALVA (Minister for Health).—

(*a*) Three private Medical Colleges at Bangalore, Belgaum and Gulbarga.

(*b*) No.

(*c*) 94—From June 1960.

(*d*) the posts were advertised in the year 1960 by the Public Service Commission. For want of qualified personnel the Public Service Commission could not recommend the candidates to various posts.

ಶ್ರೀ ಎ. ಕೃಷ್ಣಶೆಟ್ಟಿ.—ಬೆಂಗಳೂರು, ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ ತೆರೆದಿರುವ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಎಷ್ಟು ಸ್ಥಾನಗಳನ್ನು ಅರಿಸಲಾಗಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ 120, 120 ; ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ವಿವರಗಳು ಇನ್ನೂ ನನಗೆ ಸಿಕ್ಕಿಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ಸರಕಾರದ ಪರತ್ತಿನಂತೆ ಭರ್ತಿ ಮಾಡಲಿಕ್ಕೆ ಇಲ್ಲಿ ಎಷ್ಟು ಸ್ಥಾನಗಳನ್ನು ಕಾದಿರಿಸಲಾಗಿದೆ ?

ಶ್ರೀ ಕೆ. ನಾಗಪ್ಪ ಆಳ್ವ.—12 ಮತ್ತು 12 ಸ್ಥಾನಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮೂರು ವೈದ್ಯಕೀಯ ಕಾಲೇಜುಗಳಿಗೂ ವಿದ್ಯಾರ್ಥಿಗಳನ್ನು ಆರಿಸುವ ಸಂಬಂಧವಾಗಿ ಅನುಸರಿಸುವ ರೀತಿ ನೀತಿಗಳೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ವಿವರಗಳು ದೊರೆತಿಲ್ಲ. ಕೆ. ಇ. ಐ. ಸೊಸೈಟಿಯ ಮತ್ತು ಎಚ್. ಇ. ಎ. ಸೊಸೈಟಿಗೆ ಸೇರಿದುದರಿಂದ ಅಡ್ಮಿಷನ್ನುಗಳೂ ಅವರಿಗೇ ಸೇರಿರುತ್ತವೆ.